ಬಿಲ್‌ನ್ನು introduce ಮಾಡತಕ್ಕಂಥಾದ್ದರಲ್ಲಿ ರಾಜಕಾರಣ ಮಾಡಬಾರದು ಎಂದು ನಮ್ಮ ಉದ್ದೇಶ.

ಅಧ್ಯಕ್ಷರು : ಈಗ 107ರ ಪ್ರಕಾರ ವಾಪಸ್ಸು ಪಡೆಯುವುದಕ್ಕೆ ಅವಕಾಶ ಇದೆ. ಅದಕ್ಕೆ ಏಕೆ ಇನ್ನೊಂದು ಚರ್ಚೆ. ಅವರಿಗೆ ಎಲ್ಲಾ ಅಧಿಕಾರ ಇದೆ. ಪ್ರತಿಯೊಂದಕ್ಕೂ ಚರ್ಚೆಯಾದರೆ ಹೇಗೆ? 107ರ ನಿಯಮದಲ್ಲಿ ಇದೆ, they can take back.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಆಯಿತು, ನಾವು ಏನು ಹೇಳುತ್ತಿದ್ದೇವೆಂದರೆ, ಅದನ್ನು ಯಾವತ್ತು introduce ಮಾಡಬಾರದು ಎನ್ನುವ ನಿಟ್ಟಿನಲ್ಲಿ ಹೇಳಿದೆವು. ಈ ಸಮಯದಲ್ಲಿ ವಾಪಸ್ಸು ತೆಗೆದುಕೊಳ್ಳುತ್ತೇವೆ ಎನ್ನುವುದು ಬೇಡ.

4. ಶಾಸನ ರಚನೆ:

ಅ) ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

(1) ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ(ತಿದ್ದುಪಡಿ) ವಿಧೇಯಕ, 2009

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ (ತಿದ್ದುಪಡಿ) ವಿಧೇಯಕ 2009 ಸಂಖ್ಯೆ 14 ಹಿಂದಕ್ಕೆ ಪಡೆಯಲು ಸಭೆಯು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ...

ಶ್ರೀ ಟಿ.ಬಿ ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು introduce ಮಾಡಿದ್ದು ಏಕೆ? ವಾಪಸ್ಸು ತೆಗೆದುಕೊಂಡಿದ್ದು ಏಕೆ? ನೀವು ಏಕೆ ವಾಪಸ್ಸು ತೆಗೆದುಕೊಳ್ಳುತ್ತೀರೆಂದು ಹೇಳಿ.

ಅಧ್ಯಕ್ಷರು : 107 ರಲ್ಲಿ it is very clear.

ಶ್ರೀ ಟಿ.ಬಿ. ಜಯಚಂದ್ರ : ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ಆದರೆ ಹೇಳಿಕೆ ಕೊಡಬಾರದು ಎಂದು ಇದೆಯೇ? ಕಾರಣ ಹೇಳಬಾರದು ಎಂದು ಇದೆಯೇ? ನಾನು ಹೇಳುವುದೇನೆಂದರೆ ಈಗ ನೀವು ವಾಪಸ್ಸು ತೆಗೆದುಕೊಳ್ಳುವುದು ಮುಂದಕ್ಕೆ ತರುವುದಿಲ್ಲವೆನ್ನುವ ಉದ್ದೇಶವೇ? ಅದನ್ನಾದರೂ ಬಾಯಿಬಿಟ್ಟು ಹೇಳಲಿ. ಈಗ ಒಂದು ಕೆಲಸ ಮಾಡಿ. ನಾವೇನು ಅವರೇ ಹೇಳಬೇಕೆಂದು ಹೇಳುತ್ತಿಲ್ಲ. Parliamentary Minister ಹೇಳಿದರೂ ಕೂಡ ನಾವು ಅದನ್ನು ಕೇಳುತ್ತೇವೆ. ದಯಮಾಡಿ ಅದು ಅರ್ಥವಾಗಬೇಕು. ಏಕೆಂದರೆ ನಾನು ಒಂದು ಕ್ರಿಯಾಲೋಪವನ್ನು ಎತ್ತಬೇಕಾಗುತ್ತದೆ. Agriculture ಮೇಲೆ ನೀವು ಇವತ್ತು ಒಂದು ಬಿಲ್‌ನ್ನು introduce ಮಾಡಿದಿರಿ. ಒಂದು ವರ್ಷವಾಯಿತು, ಒಂದು ವರ್ಷದಲ್ಲಿ ಮೂರು ಬಾರಿ replacement ತರುತ್ತೀರಲ್ಲ, ಇದೇನಿದು? ಇದರಿಂದ ವಿಧಾನಸಭೆಗೆ ಘನತೆ ಬರುತ್ತದೆಯೇ? ಗೌರವ ಬರುತ್ತದೆಯೇ? ಅಸೆಂಬ್ಲಿಯಲ್ಲಿ ನಡೆಯುವುದರಲ್ಲಿ, ಚರ್ಚೆಯಾಗುವುದರಲ್ಲಿ, ಈ ಬಿಲ್ ತರುವುದಕ್ಕೆ ಏನಾದರೂ ಸಂಬಂಧವಿದೆಯಾ? ನಾನು ಎಂದೂ ಕೇಳಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಅದನ್ನು introduce ಮಾಡುವುದಕ್ಕೆ ಆಗಲಿಲ್ಲ. ನೀವು ಕೃಷಿ ಸಚಿವರಾಗಿದ್ದವರು, ನಿಮಗೆ ಕಳಕಳಿ ಇದೆ, ಈ ಸಲ ನಿಮ್ಮ ಸಹಕಾರದಿಂದಲೇ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ನೀವು ನಾಳೆ Agriculture Bill introduce ಮಾಡುವುದಕ್ಕಿಂತ ಮುಂಚೆ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡಿ ಅಂತಿಮವಾಗಿ ತೆಗೆದುಕೊಂಡು ಬನ್ನಿ. ದಯಮಾಡಿ ಏಕಾಏಕಿ ತರುವಂತಹ ಕೆಲಸವನ್ನು ಮಾಡಬೇಡಿ. ನಮಗೆ ಅರ್ಥವಾಗಬೇಕು. ಅದನ್ನು ತರತಕ್ಕಂಥ ಉದ್ದೇಶವೇನು? ಮತ್ತೇ ಅದನ್ನು ಮೂರು ತಿಂಗಳಲ್ಲಿ ವಾಪಸ್ಸು ತೆಗೆದುಕೊಳ್ಳುವಂತಹ ಉದ್ದೇಶವೇನು ಎನ್ನುವುದನ್ನು ಹೇಳಿದರೆ ಒಳ್ಳೆಯದು. ನಾವು ಇನ್ನು ಮುಂದೆ ಖಂಡಿತ ಈ ಬಿಲ್ ತರುವುದಿಲ್ಲ ಅದಕ್ಕೆ ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆ ಎಂದು ಅಂದುಕೊಂಡಿರುವುದು.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ನಾವು ಈ ಮನೆಯಲ್ಲಿ ನಿಮಗೆ ಆಗ್ರಹ ಮಾಡುತ್ತೇವೆ, ಮುಂದೆ ಯಾವತ್ತು ಕೂಡ ಈ ಬಿಲ್ ತರಬೇಡಿ. ಪೂರ್ತಿ ವಾಪಸ್ಸು ತೆಗೆದುಕೊಂಡು ಬಿಡಿ.

ಡಾ: ಹೆಚ್.ಸಿ. ಮಹದೇವಪ್ಪ : ನಿಯಮಾವಳಿಗಳಲ್ಲಿ ಬಿಲ್ introduce ಮಾಡುವುದಕ್ಕೆ ಮತ್ತು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಸರ್ಕಾರ ಒಂದು ಕಾಯಿದೆಯನ್ನು ಅವರ ಮನಸೋಯಿಚ್ಛೆ ಇಷ್ಟ ಬಂದ ಹಾಗೆ introduce ಮಾಡುವುದು ಇಲ್ಲದಿದ್ದಾಗ ವಾಪಸ್ಸು ತೆಗೆದುಕೊಳ್ಳುವುದು, ಆ ರೀತಿಯ ಭಾವನೆ ತಳೆಯುವುದು ತಪ್ಪು, ಸರಿಯಾದುದಲ್ಲ. ಇವತ್ತು ಆ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಮಾನ್ಯ ಪಶುಸಂಗೋಪನಾ ಸಚಿವರು ಹೇಳುತ್ತಿದ್ದಾರೆ. ವಾಪಸ್ಸು ತೆಗೆದುಕೊಳ್ಳುವಾಗ ಅದಕ್ಕೆ ಕಾರಣ ಕೊಟ್ಟು, ಸಂವಿಧಾನಬಾಹಿರವಾದಂತಹ ಈ ಒಂದು ಕಾಯಿದೆಯನ್ನು ನಾವು introduce ಮಾಡುವುದೇ ಇಲ್ಲ, ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು : It is a Central Act.

ಮಾನ್ಯ ಸದಸ್ಯರು : ಹಾಗೆ ಹೇಳಿ ಸಂವಿಧಾನಕ್ಕೆ ಅಪಚಾರ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮಂತ್ರಿಗಳೆ, ಕುಳಿತುಕೊಳ್ಳಿ, ಏಕೆ ನಿಂತುಕೊಂಡುಬಿಟ್ಟಿರಿ, ಮಾನ್ಯ ಸುರೇಶ್ ಕುಮಾರ್ ಕುಳಿತುಕೊಳ್ಳಿ ಎಂದು ಹೇಳಿದರೆ objection ತೆಗೆದುಕೊಂಡು ಬಿಡುತ್ತಾರೆ.

ಅಧ್ಯಕ್ಷರು : ಇದಕ್ಕೆ ಚರ್ಚೆ ಬೇಡ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಚರ್ಚೆ ಅಲ್ಲ, ಸ್ವಲ್ಪ ತಮಾಷೆ ಇರಬೇಕು, ಇಲ್ಲದಿದ್ದರೆ ಬಹಳ ಕಷ್ಟವಾಗಿಬಿಡುತ್ತದೆ. ಚರ್ಚೆಗೆ ಬಂದಾಗ ಇದು constitutional or unconstitutional ಅಲ್ಲ. ಇದು ಬಹುಸಂಖ್ಯಾತ ಜನರ cultureಗೆ ವಿರುದ್ಧ ಇದೆಯಾ? ಇಲ್ಲವಾ? ಇದನ್ನು ಯಾರನ್ನೋ abuse ಮಾಡುವುದಕ್ಕೋಸ್ಕರ ತಂದಿರುವಂಥ

ಕಾಯಿದೆಯಾ? ಇಲ್ಲವಾ? ಒಂದು ವರ್ಗದ ಜನರಿಗೆ ನೋವು ಉಂಟು ಮಾಡುವುದಕ್ಕೆ ತಂದಿರುವಂಥದ್ದಾ?

ಶ್ರೀ ಎಸ್. ಸುರೇಶ್‌ಕುಮಾರ್ : ಅದನ್ನು ಕಾಯಿದೆ ಬಂದಾಗ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ಆಗ ಚರ್ಚೆ ಮಾಡೋಣ. ಮಾನ್ಯ ಸುರೇಶ್‌ಕುಮಾರ್‌ರವರೆ, ಈಗ ಏನಾಗುತ್ತದೆಂದರೆ, ನೀವು ಇದನ್ನು ಒಂದೇ ಸಾರಿ ತೆಗೆದುಕೊಂಡು ಬರುವುದಿಲ್ಲವೆಂದು ಹೇಳಿದರೆ ಒಳ್ಳೆಯದು, ಏಕೆಂದರೆ ಜನರೆಲ್ಲಾ ಇದಕ್ಕೆ ವಿರೋಧವಿದ್ದಾರೆ, ನೀವು reaction ನೋಡಿದ್ದೀರಲ್ಲಾ 90% are opposing this bill.

ಶ್ರೀ ಎಸ್. ಸುರೇಶ್‌ಕುಮಾರ್ : 90% ಎಂದು ಹೇಳಲಿಕ್ಕೆ ಇಡೀ ರಾಜ್ಯದ್ದು referendum ಏನೂ ನಡೆದಿಲ್ಲ. ಒಂದಷ್ಟು ಪ್ರತಿಭಟನೆ, ಒಂದಷ್ಟು ವಿರೋಧವನ್ನು ವ್ಯಕ್ತಪಡಿಸಿದ್ದಾರೆ, ಅದನ್ನೆಲ್ಲಾ ನೋಡಿಕೊಂಡು ನಾವು ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಬಹಳ ಜನ intellectuals, writers, Dalits ಮತ್ತೆ ರೈತರು ಎಂದರೆ ಎಷ್ಟು ಆಯಿತು?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಿದ್ದರಾಮಯ್ಯನವರೆ, ಏನು ಆಗಿದೆಯೆಂದರೆ intellectuals ಇರಬಹುದು, ರೈತರು ಇರಬಹುದು, ಎಲ್ಲಾ ಬೇರೆ ಬೇರೆ ಸಂಘಟನೆಗಳು ಇವೆ. ಎರಡು ಅಭಿಪ್ರಾಯವಿದೆ, ಒಂದು ಅಭಿಪ್ರಾಯವನ್ನು ನೀವು ಹೇಳುತ್ತಿದ್ದೀರಿ, ಇನ್ನೊಂದು ಅಭಿಪ್ರಾಯ ನಮಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ನೋಡಿ ನಿಮ್ಮ ಕೈಯಲ್ಲಿ ತಪ್ಪು ಮಾಡಿಸುತ್ತಾರೆ. ಅದನ್ನು ನೀವು permanent ಆಗಿ ವಾಪಸ್ಸು ತೆಗೆದುಕೊಂಡು ಬಿಡಿ. ಇದನ್ನು ಮತ್ತೆ introduce ಮಾಡುವುದಕ್ಕೆ ತರಬೇಡಿ.

ಅಧ್ಯಕ್ಷರು : ಆಯಿತು. ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ (ತಿದ್ದುಪಡಿ) ವಿಧೇಯಕ 2009

ಹಿಂದಕ್ಕೆ ಪಡೆಯಲು ಅನುಮತಿ ಕೋರಿಕೆ

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡುವುದು".

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು ಮತ್ತು ಹಿಂದಕ್ಕೆ ಪಡೆಯಲು ಅನುಮತಿ ನೀಡಲಾಯಿತು

(ಆ) ವಿಧೇಯಕ ಮಂಡನೆ

(1) ಕರ್ನಾಟಕ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕ 2010 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–1)